ಅಲ್ಲದೆ ಈ ಕಾಯಿಲೆ ರಕ್ತದ ಹರಿವು ಮತ್ತು ಆಮ್ಲಜನಕವನ್ನು ದೇಹದ ಎಲ್ಲಾ ಭಾಗಗಳಿಗೆ ತಲುಪದಂತೆ ತಡೆಯುತ್ತದೆ. ಬಹುಮುಖ್ಯವಾದ ಲಕ್ಷಣಗಳೆಂದರೆ–

- ತುಂಬಾ ಮೈ ಕೈ ನೋವು ಜೊತೆಗೆ ತಲೆನೋವು, ತಲೆಸುತ್ತು
- ಕಿಬ್ಬೊಟ್ಟೆ, ಬೆನ್ನು, ಕಾಲುಗಳಲ್ಲಿ ಸೆಳೆತ
- ಎದೆನೋವು, ಕೆಮ್ಮು, ಜ್ವರ, ಉಸಿರಾಟಕ್ಕೆ ತೊಂದರೆ
- ತ್ವಚೆ ಬಿಳಿಚಿಕೊಳ್ಳುವುದು
- ಮಾತನಾಡಲು, ನಡೆದಾಡಲು ತೊಂದರೆಯಾಗುವುದು
- ಪದೇ ಪದೇ ಮೂತ್ರ ವಿಸರ್ಜನೆ, ಮೂತ್ರದಲ್ಲಿ ರಕ್ತ ಬರುವುದು
- ಕಣ್ಣುಗಳಲ್ಲಿ ಊತ, ನಿದ್ರಾಹೀನತೆ

### ಬರದಂತೆ ತಡೆಯಬಹುದೇ?

'ಈ ಕಾಯಿಲೆ ಆನುವಂಶಿಕವಾಗಿರುವುದರಿಂದ ಮಗುವಿನ ಸಂಪೂರ್ಣ ತಪಾಸಣೆಯನ್ನು ಆರಂಭದ ಹಂತದಲ್ಲೇ ಮಾಡಿದರೆ ಚಿಕಿತ್ಸೆ ಸುಲಭ. ತಂದೆ ಹಾಗೂ ತಾಯಿ ಇಬ್ಬರಿಗೂ ಸಿಕೆಲ್‌ಸೆಲ್ ಅನೀಮಿಯಾ ಇದ್ದರೆ, ಅಂಥ ಮಕ್ಕಳಿಗೆ ಶೇ.75ರಷ್ಟು ಈ ಕಾಯಿಲೆ ರಕ್ತದ ಮೂಲಕವೇ ಬರುತ್ತದೆ. ತಾಯಿ ಅಥವಾ ತಂದೆ ಒಬ್ಬರಲ್ಲಿ ಈ ಸಮಸ್ಯೆ ಇದ್ದರೆ, ಮಕ್ಕಳಿಗೆ ಈ ಕಾಯಿಲೆ ಬರುವ ಸಾಧ್ಯತೆ ಕಡಿಮೆ. ಈ ಕಾಯಿಲೆಯನ್ನು ಗರ್ಭದಲ್ಲಿಯೇ ಕೆಲವು ಪರೀಕ್ಷೆಗಳಿಂದ ಕಂಡು ಹಿಡಿಯಬಹುದೇ ಹೊರತು, ಅದನ್ನು ಗರ್ಭದಲ್ಲಿಯೇ ತಡೆಯಲು ಸಾಧ್ಯವಿಲ್ಲ. ಆದರೆ ಮಗು ಹುಟ್ಟಿದ ಅಸ್ಥಿಮಜ್ಜೆ ಕಸಿ ಮಾಡಿಸಿ ಸಂಪೂರ್ಣ ಗುಣಪಡಿಸಬಹುದು' ಎಂದು ವಿವರ ನೀಡುತ್ತಾರೆ ಡಾ. ವಸುಂಧರಾ.

'ಒಮ್ಮೆ ಅಸ್ಥಿಮಜ್ಜೆ ಕಸಿ ಮಾಡಿಸಿಕೊಂಡರೆ ಮತ್ತೆ ಈ ರೋಗ ಮರುಕಳಿಸುವ ಸಾಧ್ಯತೆ ಕಡಿಮೆ' ಎನ್ನುವ ಅವರು, 'ಮಗುವಿಗೆ ಅಸ್ಥಿಮಜ್ಜೆ ಕಸಿ ಮಾಡುವ ಮೊದಲು ರೋಗಿ ಹಾಗೂ ದಾನಿಯ ಅಸ್ಥಿಮಜ್ಜೆ ಸಂಪೂರ್ಣ ಹೊಂದಾಣಿಕೆಯಾಗಲೇ ಬೇಕಾಗುತ್ತದೆ' ಎನ್ನುತ್ತಾರೆ.

### ಸುದೀರ್ಘ ಇತಿಹಾಸ

ಇದು ಇಂದು ನಿನ್ನೆಯ ಕಾಯಿಲೆಯಲ್ಲ. ಸಿಕೆಲ್‌ಸೆಲ್ ಅನೀಮಿಯಾಕ್ಕೆ ಸುದೀರ್ಘ ಇತಿಹಾಸವಿದೆ. 1910ರಲ್ಲಿ ಈ ಕಾಯಿಲೆ ಪಾಶ್ಚಾತ್ಯ ದೇಶಗಳಲ್ಲಿ ಮೊದಲ ಬಾರಿಗೆ ಪತ್ತೆಯಾಗಿತ್ತು. ಮುಂದೆ ಯೂರೋಪಿನ ದೇಶಗಳಲ್ಲಿ, ಮಧ್ಯಪ್ರಾಚ್ಯ, ಆಫ್ರಿಕಾ, ಅರೇಬಿಯಾ, ಭಾರತದ ಕೆಲವು ಕಡೆಗಳಲ್ಲಿ ಈ ರೋಗ ವ್ಯಾಪಕವಾಗಿತ್ತು.

### ಚಿಕಿತ್ಸೆ ಏನು?

ಆರಂಭಿಕ ಹಂತದಲ್ಲಿ ಚಿಕಿತ್ಸೆ ಸರಳ ಹಾಗೂ ಔಷಧಿ ಮೂಲಕ ಸರಿಪಡಿಸಬಹುದು. ಆರಂಭಿಕ ಹಂತ ದಾಟಿದ ಬಳಿಕ ರಕ್ತದ ವರ್ಗಾವಣೆ, ಅಸ್ಥಿಮಜ್ಜೆ ಕಸಿ ಒಂದೇ ದಾರಿ. ■

# ಗೌಟ್ ಆರ್ಥರೈಟಿಸ್

**ಉರಿಯೂತದ ಸಂಧಿವಾತಕ್ಕೆ ಗೌಟ್ ಎಂದು ಕರೆಯಲಾಗುತ್ತದೆ. ಆಯುರ್ವೇದದಲ್ಲಿ ಇದಕ್ಕೆ ಉತ್ತಮ ಚಿಕಿತ್ಸೆ ಇದೆ.**

■ ಡಾ. ರೋಹಿಣಿ ಎಚ್‌ಡಿ.



ಗೌಟ್ (Gout) ಪುರುಷರಲ್ಲಿ ಹೆಚ್ಚು ಪ್ರಚಲಿತದಲ್ಲಿರುವ ಉರಿಯೂತದ ಸಂಧಿವಾತ. ಇದರಲ್ಲಿ ಹಠಾತ್ ತೀವ್ರ ನೋವು, ಊತ, ತ್ವಚೆಯ ಬಣ್ಣ ಕೆಂಪಾಗುವುದು ಮತ್ತು ಸಹಿಸಲಾಗದ ನೋವು ಹೆಚ್ಚಿನದಾಗಿ ಕಾಲಿನ ಅಥವಾ ಕೈ ಹೆಬ್ಬೆರಳಿನಲ್ಲಿ ಕಾಣಿಸಿಕೊಳ್ಳುತ್ತದೆ. ಇದು ಆಗಾಗ್ಗೆ ಮಧ್ಯರಾತ್ರಿಯಲ್ಲಿ ನೋವು ಮತ್ತು ಉರಿಯ ಅನುಭವದಿಂದ ರೋಗಿಯನ್ನು ಎಚ್ಚರಗೊಳಿಸುತ್ತದೆ. ಆಯುರ್ವೇದದಲ್ಲಿ ಈ ಸಮಸ್ಯೆಯನ್ನು ವಾತರಕ್ತ, ಆಢ್ಯವಾತವೆಂದು ಎಂದು ಕರೆಯುತ್ತಾರೆ. ಸಹ ಕರೆಯಲಾಗುತ್ತದೆ. ಹಿಂದೆ ಇದು ಶ್ರೀಮಂತರನ್ನು ಕಾಡುವ ಸಮಸ್ಯೆಯಾಗಿತ್ತು. ಕಾಲು, ಕೈಗಳ ಸಣ್ಣ ಸಂಧಿಗಳಲ್ಲಿ (joints) ಈ ಸಮಸ್ಯೆ ಕಾಣುವುದರಿಂದ ಕುಡ್ಡವಾತವೆಂದೂ ಕರೆಯಲಾಗುತ್ತದೆ.

### ಕಾರಣಗಳು

ಆಯುರ್ವೇದದ ಪ್ರಕಾರ ಅತಿಯಾದ ಲವಣ (ಉಪ್ಪು), ಹುಳಿ, ಖಾರ, ಆಮ್ಲೀಯ ಆಹಾರ, ಜಿಡ್ಡಿನ, ಉಷ್ಣ, ಕೊಳಕು ನೀರಿನಲ್ಲಿನ ಮೀನಿನ ಸೇವನೆ, ಮಾಂಸ ಸೇವನೆ, ಜೌಗು ಪ್ರದೇಶದಲ್ಲಿನ ಪ್ರಾಣಿಗಳ ಮಾಂಸ ಸೇವನೆ, ಎಳ್ಳಿನಿಂದ ತಯಾರಾದ ಆಹಾರ, ಕಬ್ಬು, ಮೊಸರು, ಹುಳಿಯಾದ ಗಂಜಿ, ಮದ್ಯಸೇವನೆ, ಹುಳಿಯಾದ ಮಜ್ಜಿಗೆ, ಅತಿ ಸಿಹಿಯಾದ ಆಹಾರ ಸೇವನೆ, ಹಗಲಿನಲ್ಲಿ ಮಲಗುವ ಅಭ್ಯಾಸ, ರಾತ್ರಿ ಜಾಗರಣೆ, ಜಡ ಜೀವನಶೈಲಿ, ನಿಯಮಿತವಾಗಿ ದೇಹದ ಶೋಧನೆ ಮಾಡದೆ ಇರುವುದು, ನಿರಂತರವಾಗಿ ವಾಹನ ಚಾಲನೆ ಮಾಡುವಂಥವರಲ್ಲಿ, ಬಹಳ ಸಮಯದವರೆಗೆ ನಿಂತು ಕೆಲಸ ಮಾಡುವವರಲ್ಲಿ ಉದಾ: ಸೆಕ್ಯುರಿಟಿ ಗಾರ್ಡ್‌ಗಳಲ್ಲಿ, ಬಸ್ ಕಂಡಕ್ಟರ್‌ಗಳಲ್ಲಿ ಗೌಟ್ ಕಾಯಿಲೆ ಸಾಮಾನ್ಯ.

ಈ ಕಾಯಿಲೆ ಬರುವ ಮುಂಚೆ ಕೆಲ ಲಕ್ಷಣಗಳನ್ನು ತೋರ್ಪಡಿಸುತ್ತದೆ. ಅವೆಂದರೆ–

- ಅತಿಯಾಗಿ ಬೆವರು ಬರುವುದು ಅಥವಾ ಬೆವರು ಬರದೇ ಇರುವುದು
- ದೇಹದ ಸಂಧಿಗಳು ಕಂದು ಅಥವಾ ಕಪ್ಪು ಬಣ್ಣಕ್ಕೆ ತಿರುಗುವುದು
- ಕೆಲವರಲ್ಲಿ ಸಂಧಿಗಳಲ್ಲಿ ಸ್ಪರ್ಶ ಜ್ಞಾನ ಕಡಿಮೆಯಾಗುವುದು.

### ಎರಡು ವಿಧಗಳು

ಉತ್ತಾನ (Superficial) ವಾತರಕ್ತ ಮತ್ತು ಗಂಭೀರ (deep seated) ವಾತರಕ್ತ

ಉತ್ತಾನ ವಾತರಕ್ತದ ಲಕ್ಷಣಗಳು: ಇದು ಬರೀ ಮೇಲ್ಭಾಗದಲ್ಲಿರುವುದು. ಸಂಧಿಗಳಲ್ಲಿನ ತ್ವಚೆ ನಸು ಕಪ್ಪುಬಣ್ಣಕ್ಕೆ ಅಥವಾ ಕೆಂಪು ಬಣ್ಣಕ್ಕೆ ತಿರುಗುವುದು. ತುರಿಕೆ, ಉರಿ, ನೋವು, ಚುಚ್ಚುವುದು, ಜಗ್ಗುವಿಕೆ ಈ ರೀತಿಯ ಲಕ್ಷಣಗಳು ಕಂಡುಬರುತ್ತವೆ.

ಗಂಭೀರ ವಾತರಕ್ತದ ಲಕ್ಷಣಗಳು: ಸಂಧಿಗಳಲ್ಲಿ ಬಾವು ಬರುವುದು, ತ್ವಚೆ ಕಪ್ಪು ಅಥವಾ ಕೆಂಪು ಬಣ್ಣಕ್ಕೆ ತಿರುಗುವುದು. ಅತಿಯಾದ ನೋವು, ಉರಿ, ಚುಚ್ಚುವುದು, ದೀರ್ಘಕಾಲದಲ್ಲಿ ಸಂಧಿಗಳ ವಕ್ರತೆ ಕಂಡುಬರುತ್ತವೆ.

ಪಥ್ಯ: ಪಥ್ಯ ಆಹಾರದ ಸೇವನೆಯಿಂದ ಕಾಯಿಲೆಯ ತೀವ್ರತೆಯನ್ನು ಕಡಿಮೆಗೊಳಿಸಬಹುದು. ಔಷಧದ ಜೊತೆಗೆ ಉತ್ತಮ ಆಹಾರ ಸೇವನೆ ಮತ್ತು ಜೀವನಶೈಲಿ ಬದಲಾವಣೆ ಪ್ರಮುಖ ಪಾತ್ರ ವಹಿಸುತ್ತದೆ. ಹಳೆಯ ಬಾರ್ಲಿ ಅಕ್ಕಿ, ಗೋಧಿ, ಕೋಳಿ ಮಾಂಸ ಸೇವನೆ, ತೊಗರಿ, ಕಡಲೆ ಕಾಳು, ಹೆಸರು ಕಾಳು ಇವುಗಳಿಂದ ತಯಾರಾದ ಕಟ್ಟುಗಳನ್ನು ತುಪ್ಪದೊಂದಿಗೆ ಸೇವಿಸಿ.

### ಆಯುರ್ವೇದ ಚಿಕಿತ್ಸೆ

ರೋಗದ ತೀವ್ರತೆಗೆ ಅನುಸಾರವಾಗಿ ವಾತರಕ್ತ ಕಾಯಿಲೆಗೆ ಆಯುರ್ವೇದದಲ್ಲಿ ಚಿಕಿತ್ಸೆ ಇದೆ. ಉತ್ತಾನ ವಾತರಕ್ತದಲ್ಲಿ ಚೂರ್ಣದ ಪೇಸ್ಟ್ ಮಾಡಿ ಲೇಪ ಮಾಡುವುದು, ಸಿದ್ಧ ಎಣ್ಣೆಯಿಂದ ಅಭ್ಯಂಗ ಮಾಡುವುದು, ಕಷಾಯದಂತಹ ಚಿಕಿತ್ಸೆಗಳನ್ನು ನೀಡಬಹುದು. ಗಂಭೀರ ವಾತರಕ್ತದಲ್ಲಿ ಜಿಗಣೆಯನ್ನು ಬಳಸಿ, ಸೂಜಿಯಿಂದ, ಕೆಟ್ಟರಕ್ತದ ಸ್ರಾವ ಮಾಡಿಸುವುದು, ವಿರೇಚನ ಚಿಕಿತ್ಸೆ ಪರಿಣಾಮಕಾರಿ. ■